# ವಚನಗಳಲ್ಲಿನ ಜಾತಿ ಪದ್ಧತಿ ಮತ್ತು ಮೌಢ್ಯಗಳ ವಿಶ್ಲೇಷಣೆ

**ಚನ್ನವೀರಯ್ಯ**
ಮುಖ್ಯಸ್ಥರು, ಕನ್ನಡ ವಿಭಾಗ, ಆಚಾರ್ಯ ಪದವಿ ಅಧ್ಯಯನ ವಿದ್ಯಾಲಯ,
ಸೋಲದೇವನಹಳ್ಳಿ, ಬೆಂಗಳೂರು.

**Received: 23/09/2024 ; Acepted: 02/10/2024 ; Published: 05/11/2024**

**DOI: https://doi.org/10.5281/zenodo.14035388**

## ABSTRACT:

ಹನ್ನೇರಡನೇ ಶತಮಾನವನ್ನು ವಚನ ಸಾಹಿತ್ಯದ ಪರ್ವಕಾಲ ಎಂದು ಕರೆಯಬಹುದು. ಏಕೆಂದರೆ ಜನಸಾಮಾನ್ಯರ ಆಡುಭಾಷೆಯ ಮೂಲಕ ಕನ್ನಡಭಾಷೆಯನ್ನು ಉತ್ತುಂಗಕ್ಕೆ ಏರಿಸಿದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ. ಬಹು ಮುಖ್ಯವಾಗಿ ಜಾತಿ, ಮತ, ವರ್ಗ, ವರ್ಣ, ಮೇಲು, ಕೀಳು ಹಾಗೂ ಸಾಮಾಜಿಕ ಪಿಡುಗುಗಳಾದ ಮೂಢನಂಬಿಕೆಗಳು ಅನಿಷ್ಟಪದ್ದತಿಗಳ ಆಚರಣೆಯಿಂದ ಸಮಾಜದ ಅಭಿವೃದ್ಧಿಗೆ ಮಾರಕವಾದುದು ಎಂಬುದನ್ನು ಜನಸಾಮಾನ್ಯರಿಗೆ ಮನವರಿಕೆ ಮಾಡಿ ಸಾಮಾಜಿಕ ಬದಾಲಾವಣೆಗೆ ಮುನ್ನುಡಿ ಬರೆದು ನವಮನ್ವಂತರಕೆ ದಾರಿ ದೀಪವಾದವರು. ಆ ಮೂಲಕ ಸಮಾಜದ ಪರಿವರ್ತನೆಗೆ ಶ್ರಮಿಸಿದರು. ಸಾಮಾಜಿಕ ಬದಲಾಣೆಯ ಜೊತೆಗೆ ಜಾಗೃತಿ ಮೂಡಿಸುವ ಕೆಲಸ ಮಾಡಿದರು. ಅಂತಹ ಕೆಲವು ವಚನಕಾರರ ವಚನಗಳ ವಿಶ್ಲೇಷಣೆ ಈ ಲೇಖನದಲ್ಲಿ ಚರ್ಚಿಸಲಾಗಿದೆ.

## KEYWORDS:

ಜಾತಿ, ಭಕ್ತಿ, ಸಂಪತ್ತು, ಜ್ಞಾನ, ನಿತ್ಯ ಸತ್ಯ, ಲೌಕಿಕ, ವ್ಯಕ್ತಿತ್ವ.

ಹನ್ನೆರಡನೇ ಶತಮಾನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹತ್ವಪೂರ್ಣವಾದ ಒಂದು ಕಾಲಘಟ್ಟ ಹಾಗೂ ಅಪೂರ್ವವಾದ ಕಾಲವು ಕೂಡ ಆಗಿದೆ. ಸಾಹಿತ್ಯಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಯಾವುದೇ ಕಾಲಘಟ್ಟದಲ್ಲಿ ಕಾಣದಿದ್ದ ಬದಲಾವಣೆಗಳು ಕ್ರಾಂತಿಕಾರಿಯಾಗಿ ಬದಲಾದ ನಿರ್ಣಾಯಕ ಕಾಲಘಟ್ಟ. ಬಹುಜನ ವಿದ್ವಾಂಸರ ಅಭಿಪ್ರಾಯದಂತೆ ವಾಸ್ತವವಾಗಿ ವಚನಕಾರರು ಕನ್ನಡದ ಮೊದಲ ಬಂಡಾಯಗಾರರು. ಹಾಗೆಯೇ ಕನ್ನಡದ ಮೊದಲ ಬೇಸಾಯಗಾರರು ಕೂಡ ಹೌದು. ಈ ಕಾಲ ಶ್ರೀಸಾಮಾನ್ಯರಿಗೆ ಅವರ ಜೀವನ ಮೌಲ್ಯಗಳಿಗೆ ಹೊಸ ನೋಟ ದೃಷ್ಟಿಯನ್ನು ನೀಡಿದ ಕಾಲವಾಗಿದೆ. ಜಾತಿ ಮತಗಳ ಬೇಧವಿಲ್ಲದೆ ಸಾಮಾನ್ಯ ಸ್ತರದವರು ಹಾಗೂ ಇದುವರೆಗೆ ನಿರ್ಲಕ್ಷಕ್ಕೆ ಒಳಗಾಗಿದ್ದ ಸ್ತ್ರೀಯರೂ ಲೌಕಿಕ ಹಾಗೂ ಪಾರಮಾರ್ಥಿಕ ವಿಷಯಗಳ ಬಗ್ಗೆ ವಿಚಾರಗಳನ್ನು ನಿರ್ಭೀತಿಯಿಂದ ತಮ್ಮ ತಮ್ಮ

ಪರಿಭಾಷೆಯಲ್ಲಿಯೇ ಅಭಿವ್ಯಕ್ತ ಪಡಿಸಿರುವುದು ಒಂದು ವಿಶೇಷ. ಭಾಷೆ ಮತ್ತು ಛಂದಸ್ಸಿನ ದೃಷ್ಟಿಯಿಂದಲೂ ವಚನಸಾಹಿತ್ಯ ಪರಿಭಾವನ ಯೋಗ್ಯವಾಗಿದೆ. ಗದ್ಯ ಪದ್ಯ ಮಿಶ್ರಿತ ಸಂಸ್ಕೃತ ಭೂಹಿಷ್ಠವಾದ ಚಂಪೂಕವಿಗಳ 'ಸಿದ್ಧ'ರಾಜಮಾರ್ಗವನ್ನೂ ತೊರೆದು ಜನರ ಆಡುಮಾತಿನ ಲಯಕ್ಕೆ ಅನುಸಾರವಾಗಿ ಸಾಗುವ ಪ್ರಜಾಮಾರ್ಗದ ಸಾಧಕರು ವಚನಕಾರರು. ಭಕ್ತಿ ಯಾವಾಗಲು ಸಮರ್ಪಣ ಮನೋಭಾವನೆಯಿಂದ ಕೂಡಿರಬೇಕು. ಆಧ್ಯಾತ್ಮಿಕವಾಗಿ ಸಾಧನೆ ಮಾಡಬೇಕಾದರೆ, ಆಸೆಗಳನ್ನು ತ್ಯಜಿಸಬೇಕು. ಇದು ಉತ್ತಮ ಭವಿಷ್ಯದ ಮಾರ್ಗದರ್ಶನ ಕೂಡ, ಸಾರ್ಥಕವಾದ ಜೀವನ ನಡೆಸಲು ಸ್ವಪ್ರಯತ್ನ ಬಹಳ ಮುಖ್ಯವಾದುದು. ಯಾವಾಗಲು ಮನಸ್ಸಿನ ಮೇಲೆ ಸ್ವಯಂ ನಿಯಂತ್ರಣ ಮಾಡಿಕೊಂಡರೆ ಗೆಲುವು ನಿಶ್ಚಿತವಾದುದು, ಅಹಂಕಾರ ನಿರಶನದ ಬಗ್ಗೆ ತಿಳಿಸುವುದು ವಚನಸಾಹಿತ್ಯ.

ಕೆಳಗಿನ ಈ ವಚನವು ಸಾಮಾಜಿಕ ಅಸಮಾನತೆ, ಅಜ್ಞಾನ, ಮೂಢನಂಬಿಕೆಗಳನ್ನು ಪ್ರತಿಬಿಂಬಿಸುವಂತಿದೆ.

**ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ**
**ಜಲವೊಂದೆ ಶೌಚ-ಆಚಮನಕ್ಕೆ**
**ಕುಲವೊಂದೆ ತನ್ನ ತಾನರಿದವರಿಗೆ**
**ಫಲವೊಂದೆ ಷಡುದರುಶನ ಮುಕ್ತಿಗೆ**
**ನಿಲುವೊಂದೇ-ಕೂಡಲ ಸಂಗಮದೇವಾ ನಿಮ್ಮನರಿದವಂಗೆ,**

ಬಸವಣ್ಣನವರು ಈ ವಚನದಲ್ಲಿ ತಿಳಿಸಿರುವ ವಿಚಾರಗಳೇನೆಂದರೆ ಪಂಚಭೂತಗಳಲ್ಲಿ ಒಂದಾದ ಭೂಮಿ ಹಾಗೂ ನೀರು ಎಲ್ಲರಿಗೂ ಎಲ್ಲಾ ಕಾಲಕ್ಕೂ ಪ್ರತಿಯೊಂದು ಜೀವಿಗೂ ಬಹಳ ಮುಖ್ಯವಾದುದು. ಆದರೆ ಇಲ್ಲಿ ಒಂದೇ ಭೂಮಿಯ ಮೇಲೆ ನಿರ್ಮಾಣವಾಗಿರುವ ಶಿವನ ದೇವಾಲಯ ಹಾಗೂ ಶೌಚಾಲಯ ಕೂಡ ಅದೇ ಭೂಮಿಯ ಮೇಲಿದೆ. ಭೂಮಿ ಒಂದೇ ಆದರೂ ನಮ್ಮ ಜನರ ಮನಸ್ಸು ಜಾತಿ ಮತಗಳ ಸಂಕೋಲೆಯಲ್ಲಿ ಸಂಪೂರ್ಣವಾಗಿ ಮುಳುಗಿದೆ. ಅಜ್ಞಾನಿಗಳು ಆಷಾಢ ಭೂತಿಗಳು, ದುರಾಚಾರಿಗಳು, ದುಷ್ಟರು, ನಿಕೃಷ್ಟರು ವಾಸಮಾಡುವ ಜನರಿರುವ ಸ್ಥಳವೇ ಹೊಲಗೇರಿಯಾಗುವುದು. ಕೇವಲ ಆಚರಣೆಗಳ ಅನುಸರಿಸಿಬಿಟ್ಟರೆ ಉತ್ತಮ-ನೀಚ ಎಂಬ ನಿರ್ಣಯಕ್ಕೆ ಬರಲು ಸಾಧ್ಯವಿಲ್ಲ, ನೀರಿನ ಬಳಕೆ ಮೂಲಕವೇ ತೀರ್ಥ-ಕೊಳಕು ಎಂಬ ಭಿನ್ನತೆಯನ್ನು ಕಾಣಬಾರದು. ಒಂದು ಕೆರೆಯ-ಬಾವಿಯ-ತೊರೆಯ ನೀರನ್ನು ದೇವರ ವಿಗ್ರಹದ ಮೇಲೆ ಸುರಿದು ಅಭಿಷೇಕ ಮಾಡಿದರೆ ಅದು ತೀರ್ಥವಾಗುತ್ತದೆ. ಅದೇ ಕೆರೆ ಬಾವಿ ತೊರೆಯ ನೀರನ್ನು ಶೌಚಕ್ಕೆ ಬಳಸಿದರೆ ಕೊಳಕೆನಿಸಿಬಿಡುತ್ತದೆ. ಜ್ಞಾನದಿಂದ ಉತ್ತಮ-ಅಧಮ ಎಂಬ ಪರಿಕಲ್ಪನೆ ಮುಖ್ಯವೆನಿಸುತ್ತದೆ. ಕುಲದ ಮೂಲಕ ಶ್ರೇಷ್ಟ-ನೀಚ ಎಂಬುದನ್ನು ಒಪ್ಪಲಾಗದು

ಎಂದು ಬಸವಣ್ಣನವರ ಈ ಮೇಲಿನ ವಚನ ನಿರೂಪಿಸುತ್ತದೆ.

**ಸರ್ವರಿಗೊಂದೇ ಭೂತಲವೆಂದೆ**
**ಎಲ್ಲರಿಗೂ ಭಗವಂತನು ತಂದೆ**
**ಸರ್ವರಿಗೊಂದೇ ಸೂರ್ಯನ ಕಣ್ಣು**
**ವಿಧ ವಿಧ ಸಸ್ಯಕೆ ಒಂದೇ ಮಣ್ಣು**
**ಬಗೆ ಬಗೆಯಾದರೂ ದೇಹದ ಬಣ್ಣ**
**ಎಲ್ಲರ ನಗೆಯೂ ಒಂದೇ ಅಣ್ಣ**
**ಏತಕೆ ಯುದ್ಧವು? ಏತಕೆ ಮದ್ದು?**
**ಒಂದೇ ಮನೆಯೊಳಗೆಲ್ಲರು ಇದ್ದು?**

ಕವಿ ದಿನಕರ ದೇಸಾಯಿಯವರು 'ಒಂದೇ ಮನೆ' ಎಂಬ ಕವಿತೆಯಲ್ಲಿ ಈ ರೀತಿ ಹೇಳಿದ್ದಾರೆ. ಮಾನವ ಸಂಸ್ಕೃತಿ ಅದಮ್ಯ ಬಯಕೆ ಶಾಂತಿ ಮತ್ತು ಸಮಾಧಾನ, ಯುದ್ಧಗಳ ಕ್ರೌರ್ಯವನ್ನ ನೀಗಿಕೊಂಡು ಶಾಂತಿಯನ್ನು ಸ್ಥಾಪಿಸುವ ಗುರಿ ಎಲ್ಲರ ಬಯಕೆ. ಬಹುತೇಕ ನರ ಭಯಂಕರರೂ ಯುದ್ಧಗಳ ಬೆಳೆಯನ್ನು ಯುದ್ಧಗಳ ನೆಪದಲ್ಲಿ ಬೆಳೆಯಲು ಪ್ರಯತ್ನಿಸುತ್ತಾರೆ. ಜಾತಿ, ಮತ, ದ್ವೇಷ, ಅಸೂಯೆ, ಸ್ವಾರ್ಥ ಲಂಪಟತನಗಳ ಪ್ರವೃತ್ತಿಗಳುಂಟಾಗಿ ರಾಷ್ಟ್ರಗಳೇ ಅವನತಿಯನ್ನು ಕಾಣುತ್ತವೆ.

ವರ್ಣ, ವರ್ಗ, ಜನಾಂಗ, ಧರ್ಮ, ರಾಷ್ಟ್ರೀಯತೆಗಳ ಹೆಸರಿನಲ್ಲಿ ಮನುಕುಲ ಛಿದ್ರ ಛಿದ್ರವಾಗಿರುವ ಸಂದರ್ಭಗಳಲ್ಲಿ ಸಂಘರ್ಷಗಳು ಶುರುವಾದರೆ ಕಷ್ಟಕ್ಕೆ ಸಿಲುಕುವವರು ಸಾಮಾನ್ಯ ಜನ. ಹೀಗೆ ಸಮಾಜದಲ್ಲಿ ಅಶಾಂತಿ ಅಸುರಕ್ಷತೆ ಎದ್ದು ಕಾಣುತ್ತಿದೆ.

ನಮ್ಮ ಒಳ್ಳೆಯತನ ಸಮಾಜಕ್ಕೆ ತಿಳಿಯಬೇಕಾದರೆ ಮನುಷ್ಯ ಸಮಾಜಕ್ಕೆ ಮಾಡುವ ಯಾವುದೇ ಕಾರ್ಯದಿಂದ ಒಳಿತಾಗಬೇಕು. ಗರ್ವ, ಹುಸಿತನ ಹಾಗೂ ತೋರಿಕೆಯ ಮುಖವಾಡದಿಂದ ಮುಕ್ತಿ ಹೊಂದಿದರೆ ಆತ ಜೀವನದಲ್ಲಿ ಸಫಲನಾಗುವನು. ಪ್ರಸ್ತುತದಲ್ಲಿಯೂ ಕೂಡ ಸಮಾಜವು ಹಲವಾರು ಸಂಕಷ್ಟಗಳನ್ನು ಎದುರಿಸುತ್ತಿದೆ. ಹೀಗೆ ಸಮಾಜದಲ್ಲಿರುವ ಕಠೋರ ಸತ್ಯಗಳು ಸರ್ವವ್ಯಾಪಿಯಾಗಿರುವುದು ಸ್ಪಷ್ಟ ಸತ್ಯ. ಸಂಪತ್ತಿನಿಂದ ಕೆಲವರು ಭ್ರಷ್ಟರಾಗಿದ್ದಾರೆ. ತನ್ನಲ್ಲಿರುವ ಸಿರಿ-ಸಂಪತ್ತುಗಳೇ ನನ್ನೆಲ್ಲ ಸಮಸ್ಯೆಗಳನ್ನು ಬಗೆಹರಿಸುತ್ತವೆ ಎಂಬ ಭ್ರಮೆಯಲ್ಲಿ ಹಾಗೂ ಇದರಿಂದಲೇ ನಾನು ಶಾಶ್ವತವಾದ ಸುಖವನ್ನು ಪಡೆಯಬಲ್ಲೆ ಎಂಬ ಭ್ರಮೆಯಲ್ಲಿದ್ದಾನೆ ಈ ನರ ಮನುಷ್ಯ. ತಾನು ಪಡೆದಿರುವ ಸಂಪತ್ತು ನ್ಯಾಯ ಮಾರ್ಗವೋ ಅನ್ಯಾಯ ಮಾರ್ಗವೋ ಎಂಬುದನ್ನು ಅರಿಯದೇ ಇದರಿಂದ ತಾನು ಅನಂತ ಸುಖ ಪಡೆಯಲು ಹೋರಾಟ ಮಾಡುತ್ತಾ ತನ್ನ ಇಡೀ ಕುಟುಂಬ, ಬಂಧು-ಬಳಗ, ನನ್ನ ಜೊತೆಯಲ್ಲಿದೆ ಎಂಬ ಭ್ರಮೆಯಲ್ಲಿರುವವನಿಗೆ ತಾನೆ ದುಡಿದು ಸಂಪಾದಿಸಿದ ಸಂಪತ್ತು-ಹಣ, ಪ್ರೀತಿಸಿ

ಮದುವೆಯಾದ ಮಡದಿ, ಪ್ರೀತಿ ಪಾತ್ರ ಮಕ್ಕಳು, ಬಂಧು ಬಳಗ ಯಾರು ಕೂಡ ನಮ್ಮೊಡನೆ ಬರುವುದಿಲ್ಲ ಎಂಬ ನಿತ್ಯ-ಸತ್ಯ ಹಾಗೂ ಜೀವನ ಸತ್ಯವನ್ನು ಮೋಳಿಗೆ ಮಾರಯ್ಯನೆಂಬ ವಚನಕಾರ ತನ್ನ ವಚನದಲ್ಲಿ ತಿಳಿಸಿದ್ದಾನೆ.

**ಆನೆ ಕುದುರೆ ಭಂಡಾರವಿರ್ದಡೆನೋ?**
**ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು, ಮಲಗುವುದರ್ಧಮಂಚ**
**ಈ ಹುರುಳಿಲ್ಲದ ಸಿರಿಯ ನೆಚ್ಚಿ ಕೆಡಬೇಡ ಮನುಜಾ**
**ಒಡಲು ಭೂಮಿಯ ಸಂಗ, ಒಡವೆ ತಾನೇನಪ್ಪುದೋ?**
**ಕೈವಿಡಿದ ಮಡದಿ ಪರರಸಂಗ, ಪ್ರಾಣ ವಾಯುವಿನ ಸಂಗ,**
**ಸಾವಿಂಗೆ ಸಂಗಡವಾರೂ ಇಲ್ಲ ಕಾಣಾ, ನಿಃಕಳಂಕ ಮಲ್ಲಿಕಾರ್ಜುನ**

ಒಂದು ಕಾಲಕ್ಕೆ ಆನೆ-ಕುದುರೆ-ಸಂಪತ್ತುಗಳು ಅತೀ ಶ್ರೀಮಂತಿಕೆಯ ಮಾನದಂಡಗಳಾಗಿದ್ದವು. ಇವುಗಳನ್ನು ಪಡೆಯಲು ಏನೆಲ್ಲಾ ಮಾರ್ಗಗಳನ್ನು ಅನುಸರಿಸಬೇಕೋ ಅವೆಲ್ಲವುಗಳನ್ನು ಅನುಸರಿಸುತ್ತಿದ್ದುದು ಮಾನವನ ಸಹಜಗುಣವಾಗಿತ್ತು. ಹೇಗಾದರು ಸಿರಿ-ಸಂಪತ್ತು ಪಡೆಯಬೇಕು. ಸಂಪತ್ತಿದ್ದರೆ ಕೀರ್ತಿ ಯಶಸ್ಸು, ಲಭಿಸುತ್ತದೆ ಎಂಬ ಬಯಕೆಯನ್ನು ಅಪಾರವಾಗಿ ನಂಬಿದ್ದನು. ಬದುಕಿನ ಅರ್ಥವನರಿಯದವರು ಇವರಾಗಿದ್ದರು. ಸಂಪತ್ತಿನ ಸಂಗ್ರಹ ಎನ್ನುವುದು ಸದ್ಗತಿಗೆ ಮಾರಕವಾದುದು ಎಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ ನಾವೆಲ್ಲರೂ ಚಿಂತಿಸಬೇಕಾಗಿದೆ ಎನ್ನುವುದು ಸಹ ಸತ್ಯವೇ. ಸಂಪತ್ತಿನ ಸಂಗ್ರಹ ಎನ್ನುವುದು ದೌರ್ಬಲ್ಯದ ಸಂಕೇತವೇ ಸರಿ ಎನಿಸುತ್ತದೆ. ಯಾವುದೇ ಕುಂದು ಕೊರತೆಗಳಿಲ್ಲವೆಂಬಂತೆ ಅನುಸರಿಸುವುದು ಸಂಪತ್ತಿನ ಅಹಂಭಾವದಿಂದಲೇ ಹಾಗೂ ತರತಮ ಮನೋಭಾವಗಳು ಬೆಳೆಯಲು ಕಾರಣವಾಗುತ್ತವೆ. ನಮ್ಮ ಊಟಕ್ಕೆ ಎಷ್ಟು ಬೇಕು ಎಷ್ಟು ಅಗತ್ಯ ಒಂದಿಷ್ಟು ಅಕ್ಕಿ (ಒಂದು ಪಡಿ-ಅರ್ಧಸೇರು) ಮತ್ತೆ ಒಂದಿಷ್ಟು ಹಾಲು, ಇಷ್ಟರಿಂದಲೇ ನಮ್ಮ ಅಂದಿನ ಹಸಿವು ಇಂಗುವುದು. ಮನುಷ್ಯನಾದವನು ಎಷ್ಟೇ ಹಣ ಖರ್ಚುಮಾಡಿ ಮನೆ ಕಟ್ಟಿದರು, ಎಷ್ಟೇ ಸುಂದರವಾದ ಮಲಗುವ ಕೋಣೆ ನಿರ್ಮಿಸಿದರು ಅರ್ಧಮಂಚದಲ್ಲಿಯೇ ಮಲಗಬೇಕು, ಪೂರ್ಣಮಂಚದ ಮೇಲೆ ಮಲಗಲಾಗದು. ಅರ್ಧಮಂಚದಲ್ಲೇ ಮಲಗಬೇಕು-ಅಂದರೆ ಮಿತವಾಗಿದ್ದರೆ ಹಿತವಾಗಿರುತ್ತದೆ ಎಂಬುದು ಕೂಡ ಸತ್ಯ. ಸಂಪತ್ತಿನ ಕಾರಣದಿಂದ ಅಪವ್ಯಯ ಹೆಚ್ಚಾಗುತ್ತದೆ. ಸಂಪತ್ತು ಎನ್ನುವುದು ಎಲ್ಲಾ ಸಮಸ್ಯೆಗಳಿಗೂ ಮೂಲ ಕಾರಣವಾಗಿದೆ. ಅನಾವಶ್ಯಕವಾದ ಸಂಪತ್ತು ಮನುಷ್ಯನ ನೆಮ್ಮದಿಯನ್ನು ಹಾಳುಮಾಡುತ್ತದೆ. ವ್ಯರ್ಥವಾಗುವ ವ್ಯಯವಾಗುವ ಸಂಪತ್ತು ಪಾಪಾರ್ಜಿತವಾದುದು ಎಂಬುದನ್ನು ತಿಳಿಯಬೇಕಾಗಿದೆ. ಹೆಣ್ಣು, ಹೊನ್ನು, ಮಣ್ಣು ಎಲ್ಲವೂ ಕ್ಷಣಿಕ ಎನ್ನುವುದನ್ನು ತಿಳಿದ ಮಾನವನು ಅದರಿಂದಲೇ ಕಡು ವ್ಯಾಮೋಹಿಯಾಗಿರುವನು. ಮನುಷ್ಯ ಧರಿಸಿರುವ ನಶ್ವರ ದೇಹಕ್ಕೆ ಪೂರಕವಾಗಿರುವ ಪ್ರಾಣ, ದೇಹದ ಆಡಂಬರಕ್ಕೆ ಧರಿಸಿರುವ ಒಡವೆಗಳು ಜೀವನ

ಸಂಗಾತಿ–ಬಾಳಸಂಗಾತಿಯಾಗಿರುವ ಸಹಧರ್ಮಿಣಿ ಹೆಂಡತಿ, ತನ್ನ ರಕ್ತ ಹಂಚಿಕೊಂಡು ಜನಿಸಿದ ಮಕ್ಕಳು–ಮನೆ–ಮಠ, ಆಸ್ತಿ–ಅಂತಸ್ತು ಅಧಿಕಾರ, ಸೌಂದರ್ಯ ಹಾಗೆ ದೇಹಕ್ಕೆ ಮುಖ್ಯವಾಗಿ ಬೇಕಾಗಿದ್ದ ಉಸಿರು ಪ್ರಾಣ ನಮ್ಮನ್ನು ತೊರೆದು ಹೋದಾಗ ಇವುಗಳಾವುವು ನಮ್ಮ ಹಿಂದೆ ಬರುವುದಿಲ್ಲ ಎಂಬ ಕಟುಸತ್ಯ ತಿಳಿದಿದ್ದರು ಎಳ್ಳಷ್ಟು ಕೂಡ ಚಿಂತಿಸುತ್ತಿಲ್ಲ. ನಮ್ಮ ದೇಹದಿಂದ ಉಸಿರು ಹೋದ ನಂತರ ನಾವು ಒಂದು ನಿರ್ಜೀವ ವಸ್ತು, ದೇಹ ಮಣ್ಣಿನಲ್ಲಿ ಅಥವಾ ಅಗ್ನಿಯಲ್ಲಿ ದಹಿಸಿ ಪಂಚಭೂತಗಳಲ್ಲಿ ಒಂದಾಗುತ್ತದೆ. ದುರಂಕಾರದ ಪ್ರತಿಫಲವಾದ ಪಾಪದ ಸಂಪತ್ತನ್ನು ಶರಣರು ಯಾವಾಗಲು ಒಪ್ಪುವುದಿಲ್ಲ. ನಮ್ಮ ಸಾವಿನ ನಂತರ ನಮ್ಮ ಪ್ರಾಣ ವಾಯುವಿನೊಡನೆ ಲೀನವಾಗಿ ಬಿಡುತ್ತವೆ. ಹೀಗೆ ದೇಹವೇ ಸಂಪೂರ್ಣ ನಶ್ವರ ಎಂಬ ಸತ್ಯ ತಿಳಿದ ಮೇಲೆ ಭಗವಂತನಾದ ಪರಶಿವನ ಧ್ಯಾನದಲ್ಲಿ ಮಗ್ನನಾಗುವುದೇ ಮುಕ್ತಿಯ ಸ್ವರೂಪ. ಮೋಳಿಗೆ ಮಾರಯ್ಯನು ತನ್ನ ವಚನಗಳಲ್ಲಿ ಕಂಡು ಬಂದ ನಿತ್ಯ–ಸತ್ಯಗಳನ್ನು ದೃಷ್ಟಾಂತಗಳನ್ನು ನೀಡಿ ಸಮಾಜದಲ್ಲಿ ಅಡಗಿರುವ ಮೌಢ್ಯಗಳನ್ನು ಅನಾವರಣಗೊಳಿಸುವ ಒಂದು ವಚನ ಹೀಗಿದೆ.

**ಎಲ್ಲ ದೇವರಿಗೆ ಮಸ್ತಕ ಪೂಜೆ**
**ನಮ್ಮ ಶಿವಭಕ್ತರ ಕರ್ಮದಭಾವಗೊಳು ಪೂಜೆಗೊಂಬುವ**
**ಶ್ರೀ ಗುರುಲಿಂಗ ಜಂಗಮಕ್ಕೆ ಉಂಗುಷ್ಟ ಪೂಜೆ ನೋಡಾ**
**ಇಕ್ಕಿದಡೆ ಉಂಬುವುದು, ಒಡನೆ ಮಾತನಾಡುವುದು.**
**ಅನೇಕ ಬುದ್ಧಿಯ ಪೇಳ್ವುದು.**
**ಇಂಥ ಪರಮ ದೈವವನುಳಿದು, ಭೂತ ಪ್ರೇತ ಪಿಶಾಚಿಗೆ ಅನ್ನವನಿಕ್ಕಿ**
**ನಿಧಾನವ ಪಡೆವೆನೆಂಬ ಭವಭಾರಿಗೆ**
**ನಾಯಕ(ನರಕ) ಮಹಾಪಾತಕ ತಪ್ಪದು ನೋಡಾ**
**ನಿಃಕಳಂಕ ಮಲ್ಲಿಕಾರ್ಜುನಾ.**

ಮೂಢನಂಬಿಕೆಗಳು ಒಂದು ಸಮಾಜದ ಬೆಳವಣಿಗೆಗೆ ಮಾರಕವಾದವುಗಳು. ಮನುಷ್ಯನಿಗೆ ಪ್ರಕೃತಿಯ ವಿದ್ಯಾಮಾನಗಳ ಬಗೆಗೆ ಅರಿವು ಮತ್ತು ಜ್ಞಾನ ಹಾಗೂ ಪ್ರಕೃತಿಯ ಸತ್ಯಾಸತ್ಯತೆಗಳನ್ನು ಅರ್ಥಮಾಡಿಕೊಳ್ಳುವಷ್ಟು ಸಾಮರ್ಥ್ಯ ಆತನಿಗಿರಲಿಲ್ಲ. ಲೌಕಿಕ ಜ್ಞಾನಕ್ಕಿಂತ ಅಲೌಕಿಕ ಜ್ಞಾನವೇ ಶ್ರೇಷ್ಟ ಎಂಬ ಬಲವಾದ ನಂಬಿಕೆ ಜನರಲ್ಲಿತ್ತು. ಇದು ಮುಂದೆ ಮೂಢನಂಬಿಕೆಯಾಗಿ ಸಮಾಜದಲ್ಲಿ ಸರ್ವವ್ಯಾಪಿಯಾಯಿತು. ಈ ಮೇಲಿನ ವಚನಗಳಲ್ಲಿ ಸಮಾಜಕ್ಕೆ ಅಂಟಿಕೊಂಡಿರುವ ಶಾಪ–ಮೌಢ್ಯದ ಮೇಲೆ ಬೆಳಕು ಚೆಲ್ಲಿದೆ. ಕಲ್ಲು ದೇವರಿಗೆ ಕೈ ಮುಗಿಯುವವರು ತಾವು ಕಟ್ಟಿಕೊಂಡ ಲಿಂಗದ ಬಗೆಗೆ ಅರಿವಿಲ್ಲದವರು, ಬುದ್ಧಿವಂತರು ಗುರುಸ್ಥಾನ ಪಡೆದು ಪವಾಡ ಪುರುಷರಾದರು. ಕಲ್ಲುದೇವರು, ಮರದೇವರು, ಮಣ್ಣುದೇವರು ಎಂಬ ಪರಿಕಲ್ಪನೆಯನ್ನು ಸಮಾಜದಲ್ಲಿ ಭಿತ್ತಿ ಇದನ್ನು ಪೂಜಿಸುವವರೆಲ್ಲರು ಕತ್ತೆ, ಹಂದಿ, ನಾಯಿಗಳಾಗಿ ಹುಟ್ಟಿ

ದುರ್ಮಾರ್ಗಿಗಳಾಗುತ್ತಾರೆ ಎಂಬ ಸತ್ಯವನ್ನು ನಮಗೆ ಮನವರಿಕೆ ಮಾಡಿದವರು ವಚನಕಾರರು. ಕಲ್ಲಿನಿಂದ ಮಾಡಿದ ಮೂರ್ತಿಗಳಿಗೆ ನಿತ್ಯ ಅಭಿಷೇಕ, ನಿತ್ಯ ಪೂಜೆ, ನಿತ್ಯ ಮಂಗಳಾರತಿ, ನಿತ್ಯ ಪ್ರಸಾದ ನೈವೇದ್ಯಗಳು ಸ್ಥಾವರ ಸ್ವರೂಪದ ಕಲ್ಲಿನ ಮೂರ್ತಿಗೆ ಸಲ್ಲುತ್ತದೆ. ಮನೆಗೆ ಬಂದಂತಹ ಶರಣರಿಗೆ ಸದ್ಭಕ್ತರಿಗೆ ಒಂದು ಸ್ವಲ್ಪವು ಈ ರೀತಿಯ ಸೇವೆ ಮಾಡುವುದಿಲ್ಲ. ಇಂತಹವರ ಬಗ್ಗೆ ಮಾರಯ್ಯನಿಗೆ ಎಲ್ಲಿಲ್ಲದ ಕೋಪ. ಹಾಗೆ ತಿರಸ್ಕಾರ, ಸಮರ್ಪಣ ಮನೋಭಾವ ಸ್ಥಾವರ ಸ್ವರೂಪದ ಪೂಜೆಗಲ್ಲ, ಜಂಗಮ ರೂಪದ ಗುರು-ಲಿಂಗ-ಜಂಗಮರಿಗೆ ತನು-ಮನ-ಧನವನ್ನು ಸಂಪೂರ್ಣವಾಗಿ ಅರ್ಪಿಸಿದರೆ ಹುಟ್ಟಿಗೆ ಸಾರ್ಥಕತೆ ಲಭಿಸುತ್ತದೆ. ಮಹಾಭಾಗ್ಯ ದೊರಕುತ್ತದೆ. ಪುಣ್ಯ ಪ್ರಾಪ್ತಿಯಾಗುತ್ತದೆ. ಯಾರು ಅಪಹರಿಸಲಾರದ ಸಂಪತ್ತು ನಿನಗೆ ಒದಗುತ್ತದೆ ಎನ್ನುತ್ತಾರೆ ಮಾರಯ್ಯ. ಇದರಿಂದ ದೂರವಾಗಿ ಭೂತ, ಪ್ರೇತ, ಪಿಶಾಚಿಗಳಿಗೆ ವಿಶೇಷವಾದ ಪೂಜೆ ಮಾಡಿ ರಕ್ತ-ಮಾಂಸಗಳನ್ನು ಅರ್ಪಣೆಮಾಡಿ ಎಲ್ಲವನ್ನು ಪಡೆಯಬಲ್ಲೆ ಎಂದು ಗರ್ವಪಡುವವನಿಗೆ ಕೆಟ್ಟನರಕ ಹಾಗೂ ಮಹಾಪಾಪ ಲಭಿಸುತ್ತದೆ. ತಮ್ಮ ಬಗ್ಗೆ ತಮಗೆ ವಿಶ್ವಾಸವಿಲ್ಲದೆ-ನಂಬಿಕೆ ಇಲ್ಲದೆ ವಿಚಾರಶೂನ್ಯರಾಗಿ ಸಂಪತ್ತಿನ ವಿಷಯವನ್ನು ತಿಳಿಯದವರ ಬಗೆಗೆ ಕಿಡಿಕಾರಿದ್ದಾರೆ ಮೋಳಿಗೆ ಮಾರಯ್ಯನವರು. ಜನರಲ್ಲಿರುವ ಅಜ್ಞಾನ, ಮೌಢ್ಯ, ನಂಬಿಕೆಗಳ ಹುಟ್ಟಿಗೆ ಮನುಷ್ಯನಲ್ಲಿರುವ ಭಯವೇ ಕಾರಣವಾಗಿದೆ. ಮೌಢ್ಯದ ಅಂದಾನುಕರಣೆಯ ಹಿಂದೆ ಅಡಗಿರಬಹುದಾದ ಹುನ್ನಾರಗಳನ್ನು ಕೂಡ ಗಮನಿಸಬಹುದಾಗಿದೆ.

**ತಾವು ಸತ್ಯರೆಂದು ನುಡಿಯದಿಪ್ಪುದೆ ಶೀಲ**
**ತಾವು ವ್ರತಗಳೆಂದು ಇದಿರಿಂಗೆ ಹೇಳದಿಹುದೆ ವ್ರತ**
**ಗುರು-ಲಿಂಗ-ಜಂಗಮದ ದೂಷಿಸದಿಹುದೆ ವ್ರತ**
**ಸಹ ಪಂಕ್ತಿಯಲ್ಲಿ ವಿಶೇಷವ ಕೊಳದಿಪ್ಪುದೆ ವ್ರತ**
**ಇಂತಪ್ಪ ವ್ರತಕ್ಕೆ ನಮೋ ನಮೋ ಎಂಬೆ,**
**ಇಂತಲ್ಲದೆ ಜಗವ ಸಿಕ್ಕಿಸುವ ಬಹುಮುಖಿಗಳಿಗೆಲ್ಲಿಯದೋ ಮುಕ್ತಿ?**
**ಮಾತಿನಲ್ಲಿ ಭಕ್ತಿ, ಮನದಲ್ಲಿ ಕತ್ತರಿ,**
**ಭಕ್ತಿಯಲ್ಲಿ ಬಲೆ, ಚಿತ್ರದಲ್ಲಿ ಕತ್ತಲೆಯಿಪ್ಪವರಿಗೆಲ್ಲಿಯದೇ ಭಕ್ತಿಶೀಲ?**
**ಇಂತಿವ ಬಲ್ಲೆನಾಗಿ ಭಕ್ತಿನನಗಿಲ್ಲ**
**ಇನ್ನೆತ್ತಣ ಮುಕ್ತಿಯೇ, ನಿಃಕಳಂಕ ಮಲ್ಲಿಕಾರ್ಜುನಾ.**

ಕೆಲವರು ನಾನು ಸತ್ಯವಂತ, ನಿಷ್ಠಾವಂತ, ಪ್ರಾಮಾಣಿಕ ನಾನು ಮಹಾಭಕ್ತ, ಮಹಾದಾನಿ-ಇಂತೆಲ್ಲವುಗಳನ್ನು ಲೋಕಕ್ಕೆಲ್ಲ ಡಂಗುರ ಹೊಡೆದು ಸಾರುತ್ತಾರೆ. ನಾನು ಸತ್ಯವಂತನೆಂಬ ಆಡಂಬರದ ವ್ರತಾಚರಣೆಗಳಿಂದ ಪ್ರತಿಬಿಂಬಿಸುವುದು ಅವಿವೇಕದ ಪರಮಾವಧಿ. ಆಂತರಂಗಿಕವಾದ ಸಂಪತ್ತು ಆಂತರಂಗಿಕವಾದ ಭಕ್ತಿಯಾಗಿರಬೇಕೆವರತು ಅದು ಎಲ್ಲರು ನೋಡಲಿ ಎಂದು ಪ್ರದರ್ಶನಗೊಳ್ಳಬಾರದು.

ಶೀಲ–ಶೌಚ–ನಡತೆ–ನಿಯಮಗಳು ಗೌಪ್ಯವಾಗಿ ಮನದಲ್ಲಿ ಅಡಗಿರಬೇಕು. ನಾನು ಸತ್ಯವಂತ–ವ್ರತಾಚಾರಕ ಎಂದು ಹೇಳದಿರುವುದೇ ವ್ರತ. ನಿಯಮ ಮತ್ತು ಅನುಷ್ಠಾನಗಳು ಆಚರಣೆಗಳಾಗಿರಬಹುದು. ಆದರೆ ಅದನೆಲ್ಲವನ್ನು ಕಂಡ–ಕಂಡವರಿಗೆಲ್ಲ ಹೇಳದಿರುವುದೇ ನಿಜವಾದ ವ್ರತದ ಫಲವಾಗಿರುತ್ತದೆ. ಗುರು–ಲಿಂಗ ಜಂಗಮದ ಶ್ರೇಷ್ಠತೆಯ ಬಗೆಗೆ ಅರಿವಿದ್ದು ವ್ರತನಿಷ್ಠನಾಗಿ ಪೂಜಿಸಿ ಅವುಗಳ ಕೃಪಾಶಿರ್ವಾದಕ್ಕೆ ಶರಣಾಗಬೇಕು. ನಮ್ಮ ದೇಹವನ್ನು ಕಾಯವನ್ನು ಶುದ್ಧಿಮಾಡಿಕೊಳ್ಳಬೇಕು–ಪಾವನವಾಗಬೇಕು. ಕಾಯಕದ ಪ್ರಭಾವದಿಂದ ಕಾಯ ಶುದ್ಧವಾಗಬೇಕು ಎಂಬುದು ಕೂಡ ಸತ್ಯ. ಸದ್ಭಕ್ತನಾದವನಿಗೆ ಬೇರೆಯವರ ಬಗೆಗೆ ಭಿನ್ನತೆಯಾಗಲಿ, ತಾತ್ಸಾರವಾಗಲಿ, ವಿರೋಧವಾಗಲಿ ಇರಬಾರದು. ಇದು ಶ್ರೇಷ್ಟವಾದ ವ್ರತ. ಇಂತಹ ವ್ರತಾಚರಣೆಗಳನ್ನು ಆಚರಿಸುವವನಿಗೆ ನಾನು ನಮಸ್ಕರಿತ್ತೇನೆ ಎಂದು ಮಾರಯ್ಯ ಹೇಳುತ್ತಾನೆ.

ಈ ಮೇಲೆ ತಿಳಿಸಿದ ವಿಚಾರಗಳು ಸದ್ಭಕ್ತನಿಗೆ ಇರಬೇಕಾದ ಗುಣಗಳ ಸ್ವರೂಪವನ್ನು ಹೊಂದಿವೆ. ಇವುಗಳಿಗೆ ವಿರುದ್ಧವಾಗಿರುವ ವಿಚಾರಗಳನ್ನು ಮೋಳಿಗೆ ಮಾರಯ್ಯ ಹೀಗೆ ತಿಳಿಸಿದ್ದಾರೆ. ಯಾವ ವ್ಯಕ್ತಿಗೆ ದೃಢವಾದ ಮನಸ್ಸು ಇರುವುದಿಲ್ಲವೋ ಮಾನವ ಇನ್ನೊಬ್ಬರಿಗೆ ಮೋಸ ಮಾಡುವುದಕ್ಕೆ ಪ್ರಯತ್ನಿಸುತ್ತಾನೋ ಹಾಗೆ ತನ್ನ ಕುಶಲತೆಯಿಂದ ಜಾಣ್ಮೆಯಿಂದ ಆಪತ್ತು ಒದಗುವಂತೆ ಮಾಡುತ್ತಾನೋ ಸಮಾಜದ್ರೋಹಿಯಾಗಿ ಗೋವಿನ ವೇಷದಲ್ಲಿರುವ ವ್ಯಾಘ್ರನಂತೆ ಪಾಪಿಯಾಗಿ ಮುಕ್ತಿ ಪಡೆಯಲಾರದವನಾಗುತ್ತಾನೆ. ಬಹಿರಂಗದಲ್ಲಿ ಭಕ್ತಿಯನ್ನು ಆರಾಧಿಸುವಂತೆ ಕಂಡು ಅಂತರಂಗದಲ್ಲಿ ಕುಲ–ಹೀನ ದುರ್ಗುಣಗಳಿದ್ದರೆ ಭಕ್ತಿ ಎಂಬ ರಸಪಾಕ ದೊರೆಯುವುದಿಲ್ಲ. ಶರಣರ ವ್ಯಕ್ತಿತ್ವವು ಬೇರೆಯವರಿಗೆ ಆದರ್ಶಪ್ರಾಯವಾಗಿ ಸಮಾಜದ ಬೆಳವಣಿಗೆಗೆ ಪೂರಕವಾಗಿರಬೇಕು. ಮೂಢನಂಬಿಕೆಗಳು ಒಂದು ದೇಶ ಹಿಂದುಳಿಯಲು ಕಾರಣ. ಪೂಜೆ, ಹರಕೆ, ಮೈಮೇಲೆ ದೇವರು ಬರುವುದು, ದೇವ ಮಾನವ ಕಲ್ಪನೆಗಳು ಈ ಸಮಾಜದಲ್ಲಿ ವಚನಕಾರರ ಕಾಲದಲ್ಲಿಯು ಬೆಳೆದಿತ್ತು ಎಂಬುದಕ್ಕೆ ವಚನಕಾರರು ತಮ್ಮ ಕೆಲವು ವಚನಗಳಲ್ಲಿ ಟೀಕಿಸಿರುವುದನ್ನು ಕಾಣಬಹುದಾಗಿದೆ. ಸಮಾಜದ ಸುಧಾರಣೆಗೆ ಮೌಢ್ಯಗಳನ್ನು, ಜಾತಿಯ ಭ್ರಮೆಯನ್ನು ಈ ಸಮಾಜದಿಂದ ಕಿತ್ತೊಗೆಯಬೇಕು. ವಿಶ್ವಮಾನವರಾಗಲು ಜಾತಿ ಮತ್ತು ಮೌಢ್ಯಗಳನ್ನು ಧಿಕ್ಕರಿಸಬೇಕಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಬಸವರಾಜು ಎಲ್. (2011). ಬಸವ ವಚನಾಮೃತ. ಸ್ನೇಹಾ ಪ್ರಿಂಟರ್. ಬೆಂಗಳೂರು.
2. ರಾಜಶೇಖರ ಜಮದಂಡಿ. (2013). ಮೊಳಿಗೆಮಾರಯ್ಯನವರ ವಚನಗಳ ದೀಪಿಕೆ. ಕನ್ನಡಸಾಹಿತ್ಯ ಪರಿಷತ್. ಬೆಂಗಳೂರು.
3. ನಿಂಗಣ್ಣ ಜಿ. ಸಿ. (ಸಂ). (2010). ಕನ್ನಡ ಸಾಹಿತ್ಯ ಸಂಸ್ಕೃತಿಕೋಶ. ವಿಶ್ವಾಸ್ ಪ್ರಿಂಟರ್. ಬೆಂಗಳೂರು.
4. ಎಂ.ಆರ್.ಶ್ರೀ. (2013). ವಚನಧರ್ಮಸಾರ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
5. ಮುಗಳಿ ರಂ. ಶ್ರೀ. (2007). ಕನ್ನಡ ಸಾಹಿತ್ಯ ಚರಿತ್ರೆ. ಗೀತಾ ಬುಕ್ ಹೌಸ್. ಮೈಸೂರು.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.